# ಪ್ರಧಾನ ವ್ಯವಹಾರ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊಸನಗರ

**ಸಿ.ಸಿ. ನಂ.56/2019**

ಪಿರ್ಯಾದುದಾರರುಃ ನಗರ ಪೋಲೀಸ್ ಠಾಣೆ.

ವಿರುದ್ಧ

ಆರೋಪಿ: ಶ್ರೀ ಕೆ.ಆರ್.ಕೃಷ್ಣಮೂರ್ತಿ

## ದೋಷರೋಪಣೆ

**ಶ್ರೀ ರವಿಕುಮಾರ, ಕೆ ಬಿ.ಎ.ಎಲ್., ಎಲ್.ಎಲ್.ಬಿ., ಪ್ರಧಾನ ವ್ಯವಹಾರ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊಸನಗರ ಆದ ನಾನು ಈ ಕೆಳಕಂಡ ಆರೋಪಿತರಾದ,**

ಆ.1 ಶ್ರೀ ಕೆ.ಆರ್.ಕೃಷ್ಣಮೂರ್ತಿ ಬಿನ್ ರಾಮಪ್ಪಗೌಡ,
ವಯಸ್ಸುಃ52 ವರ್ಷ, ಉಃ ವ್ಯವಸಾಯ,

ಆ-2 ಶ್ರೀ. ಕೆ.ಆರ್. ಡಾಕಪ್ಪಗೌಡ ಬಿನ್ ರಾಮಪ್ಪಗೌಡ,
ವಯಸ್ಸುಃ 50 ವರ್ಷ, ಉಃ ವ್ಯವಸಾಯ,
1 ಮತ್ತು 2 ರವರ ವಾಸಃ ಕೌರಿ,
ರಾವೆ ಗ್ರಾಮ, ನಗರ ಹೋಬಳಿ,
ಹೊಸನಗರ ತಾಲ್ಲೂಕು.

ನಿಮ್ಮ ಮೇಲೆ ಕೆಳಕಂಡ ಆರೋಪಣೆಯನ್ನು ಇಟ್ಟಿರುತ್ತೇನೆಃ

ದಿನಾಂಕಃ 19.11.2018 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಹೊಸನಗರ ತಾಲ್ಲೂಕು, ನಗರ ಹೋಬಳಿ, ರಾವೆ ಗ್ರಾಮ ಮಜಿರೆ ಕೌರಿಯ ಚಾಸಾ 1 ರವರು ಬಗರ್ ಹುಕುಂ ಜಾಗದಲ್ಲಿ ಬೇಲಿ ಕಟ್ಟುತ್ತಿರುವಾಗ ಆರೋಪಿತ ರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ ಚಾಸಾ1 ರವರನ್ನು ಉದ್ದೇಶಿಸಿ ಏನೋ ಸೂಳೇಮಗನೆ, ಬೋಳಿಮಗನೆ, ನಿನ್ನ ಮನೆಗೆ ರಸ್ತೆ ಬೇಕೇನೋ ಎಂದು ಅವಾಚ್ಯ ಶಬ್ದಗಳಿಂದ ಬೈದಿರುವುದು ತನಿಖೆಯಿಂದ ದೃಢಪಟ್ಟಿದ್ದು, ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹಕಲಂ 34 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಹಾಗೂ ಸಂದರ್ಭದಂದು ಆರೋಪಿತ ರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ 2 ನೇ ಆರೋಪಿಯವರಾದ ನೀವು ಕಬ್ಬಿಣದ ಕತ್ತಿಯಿಂದ ಎಡಗೈ

ಹೊಡೆದಿದ್ದು ಮತ್ತು 1ನೇ ಆರೋಪಿಯವರಾದ ನೀವು ಚಾಸಾ 1 ರವರಿಗೆ ದೊಣ್ಣೆಯಿಂದ ಬೆನ್ನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುವುದು ತನಿಖೆಯಿಂದ ದೃಡಪಟ್ಟಿರುವುದರಿಂದ ಭಾರತೀಯ ದಂಡ ಸಂಹಿತೆಯ ಕಲಂ 324 ಸಹಕಲಂ 34 ರ ರೀತ್ಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮ್ಪಾಡಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಹಾಗೂ ಸಂದರ್ಭದಂದು ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ 1ನೇ ಆರೋಪಿಯವರಾದ ನೀವು ಚಾಸಾ 1 ರವರಿಗೆ ಕೈಯಿಂದ ಗುದ್ದಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುವುದು ತನಿಖೆಯಿಂದ ದೃಡಪಟ್ಟಿರುವುದರಿಂದ ಭಾರತೀಯ ದಂಡ ಸಂಹಿತೆಯ ಕಲಂ 323 ಸಹಕಲಂ 34 ರ ರೀತ್ಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮ್ಪಾಡಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಹಾಗೂ ಸಂದರ್ಭದಂದು ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿದವರಾಗಿ, ಚಾಸಾ1 ರವರಿಗೆ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುವುದು ತನಿಖೆಯಿಂದ ದೃಡಪಟ್ಟಿರುವುದರಿಂದ ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34 ರ ರೀತ್ಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಸದರಿ ಅಪರಾಧಗಳು ಈ ನ್ಯಾಯಾಲಯದ ವಿಚಾರಣಾ ವ್ಯಾಪ್ತಿಗೆ ಬರುವುದರಿಂದ ನೀವು ವಿಚಾರಣೆಗೆ ಹಾಜರಾಗಲು ನಿರ್ದೆಶಿಸುತ್ತೇನೆ.

ಆರೋಪಿತನಿಗೆ ದಿನಾಂಕಃ 22.09.2022 ರಂದು ಅವರು ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ, ವಿವರಿಸಿ, ಅರ್ಥೈಯಿಸಿ ತೆರೆದ ನ್ಯಾಯಾಲಯದಲ್ಲಿ ಹೇಳಲಾಯಿತು.

22.09.2022

(ರವಿಕುಮಾರ್ ಕೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಹೊಸನಗರ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಹೊಸನಗರ

ಸಿಸಿ ನಂ : 56/2019

ಆಪಾದಿತನ ಹೆಸರು : ಶ್ರೀ.ಕೆಆರ್.ಕೃಷ್ಣಮೂರ್ತಿ

ತಂದೆ ಹೆಸರು : ರಾಮಪ್ಪಗೌಡ

ವಯಸ್ಸು : 52 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ರಾವೆ ಗ್ರಾಮ, ಹೊಸನಗರ ತಾಲ್ಲೂಕು.

ದಂಡ ಪ್ರಕ್ರಿಯಾ ಸಂಹಿತೆ ಕಲಂ 251ರ ಅಡಿ ಆರೋಪಿಯ ಹೇಳಿಕೆ

ಪ್ರಶ್ನೆಃ 1. ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ ಃ

ಪ್ರಶ್ನೆಃ 2. ಸದರೀ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉತ್ತರ ಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕಃ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರೀ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ಹೊಸನಗರ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಹೊಸನಗರ

ಸಿಸಿ ನಂ : 56/2019

ಆಪಾದಿತನ ಹೆಸರು : ಶ್ರೀ. ಕೆ.ಆರ್. ಡಾಕಪ್ಪಗೌಡ

ತಂದೆ ಹೆಸರು : ರಾಮಪ್ಪ ಗೌಡ

ವಯಸ್ಸು : 50 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ರಾವೆ ಗ್ರಾಮ, ಹೊಸನಗರ ತಾಲ್ಲೂಕು.

ದಂಡ ಪ್ರಕ್ರಿಯಾ ಸಂಹಿತೆ ಕಲಂ 251ರ ಅಡಿ ಆರೋಪಿಯ ಹೇಳಿಕೆ

ಪ್ರಶ್ನೆಃ 1. ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ ಃ

ಪ್ರಶ್ನೆಃ 2. ಸದರೀ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉತ್ತರ ಃ

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕಃ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರೀ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ಹೊಸನಗರ.